ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ವರದಿಗಳನ್ನೊಪ್ಪಿಸುವುದು.

ಶ್ರೀ ತಿಪ್ಪೇಸ್ವಾಮಿ (ಅಧ್ಯಕ್ಷರು ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಮಾನ್ಯ ಅಧ್ಯಕ್ಷರೆ ಹಿಂದುಳಿದ ವರ್ಗಗಳಿಗೆ ಸಾರ್ವಜನಿಕ ಉದ್ಯಮಗಳ ಸೇವೆಯಲ್ಲಿ ಇರುವ ನೇಮಕಾತಿಯಲ್ಲಿನ ಮಿಸಲಾತಿ ಬಗ್ಗೆ ಸಮಿತಿಯು ಮಾಡಿದ್ದ ನಾಲ್ಕನೇ ವರದಿಯಲ್ಲಿನ ಶಿಫಾರಸ್ಸುಗಳ ಸಂಬಂಧದಲ್ಲಿ ಸರ್ಕಾರವು ತೆಗೆದು ಕೊಂಡ ಕ್ರಮದ ಬಗೆಗಿನ ವರದಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ತಿಪ್ಪೇಸ್ವಾಮಿ.—(ಅಧ್ಯಕ್ಷರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ) ಅಧ್ಯಕ್ಷರೆ, ಮಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ಉದ್ಯೋಗ ಮತ್ತು ಸೇವಾ ನೇಮಕಾತಿಗಳಲ್ಲಿ ಅನುಸರಿಸುತ್ತಿರುವ ಮಿಸಲಾತಿ ಕುರಿತಂ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಬೆಂಗಳೂರು ವಿಮಾನ ನಿಲ್ದಾಣದ ಹತ್ತಿರ ಗಾಲ್ಫ್ ಮೈದಾನಕ್ಕೆ ಕೊಡಲಾಗಿದ್ದ ಜಮೀನಿನ ದುರುಪಯೋಗಪಡಿಸಿಕೊಂಡಿರುವುದು

ನಿಯಮ ೬೮ರ ಮೇರೆಗೆ ಚರ್ಚೆ

ಅಧ್ಯಕ್ಷರು.—ಶ್ರೀ ಬಿ. ಲಕ್ಕಪ್ಪ ಅವರು ಅಂತರ ರಾಷ್ಟ್ರೀಯ ಗಾಲ್ಫ್ ಮೈದಾನವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಸವಿಾಪವಾಗಿ ಕೊಡಲಾಗಿದ್ದ ಜಮೀನನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಚರ್ಚೆ ನಡೆಸುವುದು. ಈಗ ತಾವು ಪ್ರಾರಂಭಿಸಿ.

† ಶ್ರೀ ಬಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ನಡೆದಿರುತ್ತಿರುವ ಕೆಲವಾರು ಅವ್ಯವಹಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತಿರುವ ಉದ್ದೇಶಕ್ಕಾಗಿ ನಿಯಮ ೬೮ರ ಪ್ರಕಾರ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ದಯವಿಟ್ಟು ಅವರನ್ನು ಕರೆಯಿಸಿದರೆ ಅನುಕೂಲವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ?

ಶ್ರೀ ಬಿ. ಕೃಷ್ಣಪ್ಪ.—ಶ್ರೀ ಎಂ. ಪ್ರಕಾಶ್‌ರವರು.

ಶ್ರೀ ಎ. ಲಕ್ಷ್ಮೀಸಾಗರ್.—ನಾನೇ ಇದ್ದೇನೆ ತಾವು ಪ್ರಸ್ತಾಪ ಮಾಡಿ,

ಶ್ರೀ ಬಿ. ಲಕ್ಕಪ್ಪ.—ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಅವರಿಗೆ ಹೇಳಿ ಕರೆಯಿಸಬೇಕು. ಸರ್ಕಾರಕ್ಕೆ ಆದಾಯ ಬರುತ್ತಿರುವ ಮೂಲಗಳಲ್ಲಿ ಪ್ರವಾಸೋದ್ಯಮವು ಇಲಾಖೆಯು ಸಹ ಒಂದು. ಈ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಿ, ಈ ಮೂಲಕ ರಾಜ್ಯಕ್ಕೆ ಹೆಚ್ಚು ವರಮಾನ ಬರುತ್ತಿರುವ ಉದ್ದೇಶದಿಂದ ಒಂದು ವ್ಯವಸ್ಥೆಯಾಗಿ ಇದರಿಂದ ರಾಜ್ಯಕ್ಕೆ ಉಪಯೋಗವಾಗಲಿ ಎನ್ನುತ್ತಿರುವ ಉದ್ದೇಶದಿಂದ ಈ ನಿಗಮವನ್ನು ಸ್ಥಾಪನೆ ಮಾಡಿರುವುದಕ್ಕೆ ಈ ಪ್ರವಾಸೋದ್ಯಮ ಇಲಾಖೆ ನಮ್ಮ ರಾಜ್ಯದಲ್ಲೇ ಅಲ್ಲ, ಬೇರೆ ರಾಜ್ಯಗಳಾದ ಕಾಶ್ಮೀರದಲ್ಲಿದೆ, ಗೋವಾದಲ್ಲಿದೆ ಇನ್ನೂ ಮುಂತಾದ ಅನೇಕ ರಾಜ್ಯಗಳಲ್ಲಿ ಹೆಚ್ಚು ವರಮಾನವನ್ನು ತರುತ್ತಿರುವ ಇಲಾಖೆಯಾಗಿದೆ. ಆದರೆಲ್ಲೂ ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ಈ ನಿಗಮವನ್ನು ಸ್ಥಾಪನೆ ಮಾಡಲಾಗಿದೆ. ಆದರೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಕಣ್ಣು ಅಧಿಕಾರ ಯಾವ ರೀತಿ ದುರುಪಯೋಗವಾಗಿದೆ ಇದರಿಂದಾಗಿ ಈ ರಾಜ್ಯಕ್ಕೆ ಬರಬೇಕಾದ ವರಮಾನ ಯಾವ ರೀತಿ ಹಾಳಾಗಿದೆ ಎನ್ನ ತಕ್ಕಂತಹದ್ದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ.

ಪ್ರವಾಸೋದ್ಯಮ ನಿಗಮದ ಮೂಲಕ ಈ ರಾಜ್ಯದಲ್ಲಿ ಅಂತರರಾಷ್ಟ್ರೀಯ ಗಾಲ್ಫ್ ಮೈದಾನವನ್ನು ಅಭಿವೃದ್ಧಿಪಡಿಸುವ ಮಹತ್ತರ ಉದ್ದೇಶದಿಂದ ಚಲ್ಲಾಘಟ್ಟ ಗ್ರಾಮದ ಸವಿಾಪದಲ್ಲಿ ಇಂದಿರಾ ನಗರಕ್ಕೆ ಹೊಂದಿಕೊಂಡಂತೆ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆ ೩೯ ಎಕರೆ ಪ್ರದೇಶವನ್ನು ಬಡ